**O. S. No:65/2019**
**DW:5**

(ಇಂದು ದಿನಾಂಕಃ **07-02-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ವಿ ಟಿ ಕೆ ವಕೀಲರಿಂದ**

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| **ನಿ.ಡಿ 22** | ಮೂಲ ದಾವಾ ಸಂಃ 227/2012 ರಲ್ಲಿಯ ವಾದಪತ್ರದ ದೃಡಿಕೃತ ನಕಲು. |
| **ನಿ.ಡಿ 23 ರಿಂದ 25** | ಮೂಲ ದಾವಾ ಸಂಃ 227/2012 ರಲ್ಲಿಯ ಪ್ರತಿವಾದಪತ್ರಗಳ ದೃಡಿಕೃತ ನಕಲು. |
| **ನಿ.ಡಿ 26** | ಮೂಲ ದಾವಾ ಸಂಃ 227/2012 ರಲ್ಲಿಯ ವಿವಾದಾಂಶಗಳ ದೃಡಿಕೃತ ನಕಲು. |
| **ನಿ.ಡಿ 27** | ಮೂಲ ದಾವಾ ಸಂಃ 227/2012 ರಲ್ಲಿಯ ತೀರ್ಪಿನ ದೃಡಿಕೃತ ನಕಲು. |
| **ನಿ.ಡಿ 28** | ಮೂಲ ದಾವಾ ಸಂಃ 227/2012 ರಲ್ಲಿಯ ಡಿಕ್ರಿಯ ದೃಡಿಕೃತ ನಕಲು. |

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದಃ**

ಮೂಲ ದಾವಾ ಸಂಃ 227/2012 ರಲ್ಲಿರುವ ಆಸ್ತಿ ಸರ್ವೇ ನಂಃ 41 ಪ್ರಸ್ತುತ ದಾವೆಯ ದಾವಾ ಆಸ್ತಿಯಾಗಿರುತ್ತದೆ. ಸದರಿ ಜಮೀನಿನ ಒಟ್ಟು ಕ್ಷೇತ್ರ 21 ಎಕರೆ 33 ಗುಂಟೆ ಆಗಿರುತ್ತದೆ. ಪ್ರಸ್ತುತ ದಾವೆಯಲ್ಲಿ ಸದರಿ ಜಮೀನಿನ ಪೈಕಿ 5 ಎಕರೆ 17 ಗುಂಟೆ ದಾವಾ ಆಸ್ತಿಯಾಗಿರುತ್ತದೆ. ಸಾಕ್ಷಿಯು ಮುಂದುವರೆದು ಮೂಲ ದಾವಾ ಸಂಃ 227/2012 ರಲ್ಲಿಯ ಡಿಕ್ರಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ರದ್ದಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ಸರ್ವೇ ನಂಃ 41 ರಲ್ಲಿ 5 ಎಕರೆ 8 ಗುಂಟೆ ಮಾತ್ರ ಜಮೀನಿನ್ನು ದಾವಾ ಆಸ್ತಿಯಾಗಿದೆ. ಸದರಿ ದಾವೆಯಲ್ಲಿರುವ ಕ್ಷೇತ್ರ ಹಾಗೂ ಪ್ರಸ್ತುತ ದಾವೆಯಲ್ಲಿರುವ ಕ್ಷೇತ್ರ ಬೇರೆ ಬೇರೆಯಾಗಿದೆ ಎಂದರೆ ಸರಿ. ಸದರಿ ದಾವೆಯನ್ನು ವಾದಿ ಚವರಡ್ಡಿ ಮೇಲಗಿರಿರವರ ಆಸ್ತಿಗಳಿಗೆ ಸಂಬಂಧಿಸಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ವಾದಿಯರು ಹೇಮರಡ್ಡಿ ಮೇಲಗಿರಿ ರವರ ಕುಟುಂಬಕ್ಕೆ ಹಾಗೂ ಆಸ್ತಿಗಳಿಗೆ ಸಂಬಂಧಿಸಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರಲ್ಲಿ ನನ್ನ ಆಸ್ತಿಯೂ ಸಹ ಇರುತ್ತದೆ ಎಂದು ನುಡಿದಿರುತ್ತಾರೆ.

ಪ್ರಸ್ತುತ ದಾವೆಯ ಆಸ್ತಿ ನನಗೆ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸದರಿ ಮೂಲ ದಾವಾ ಸಂಃ 227/2012 ರಲ್ಲಿರುವ ಆಸ್ತಿ ಮಾತ್ರ ನನಗೆ ಸಂಬಂಧಿಸಿದ್ದು ಅದನ್ನು ನನ್ನ ತಂದೆ ರೂ. 3,00,000/- ಗಳನ್ನು ಪಡೆದುಕೊಂಡು ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಡಿಕ್ರಿ ರದ್ದಾಗಿರುತ್ತದೆ ಎಂದು ನುಡಿದಿರುತ್ತಾರೆ. ರಾಜೀ ಮಾಡಿಕೊಂಡ ಡಿಕ್ರಿ ಸಹ ರದ್ದಾಗಿರುತ್ತದೆ. ಸದರಿ ಡಿಕ್ರಿ ರದ್ದಾಗಿದ್ದರ ಕುರಿತು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ತಾನು ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿ ಅದರಲ್ಲಿ ನಿಡಿ-19 ಅದಕ್ಕೆ ಸಂಬಂಧಿಸಿದ ಆದೇಶವಾಗಿರುತ್ತದೆ ಎಂದು ನುಡಿದಿರುತ್ತಾರೆ. ಮೂಲ ದಾವಾ ಸಂಃ 158/2011 ರಲ್ಲಿ ಆದ ರಾಜೀ ಡಿಕ್ರಿಯನ್ನು ಪ್ರಶ್ನಿಸಿ ನಾನು ಸಿವಿಲ್ ನ್ಯಾಯಾಲಯ, ನವಲಗುಂದರವರಲ್ಲಿ ಮಿಸಲೆನಿಯಸ್ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ.

2. ನನ್ನ ಅಣ್ಣ ವೆಂಕರಡ್ಡಿ, ನಾನು, ನನ್ನ ಸಹೋದರಿಯರು ಹಾಗೂ ನನ್ನ ತಂದೆ ಮೂಲ ದಾವಾ ಸಂಃ 66/2003 ರಲ್ಲಿ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಮೂಲ ದಾವಾ ಸಂಃ 227/2012 ಹಾಗೂ ಈ ದಾವೆಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಎಚ್ ಡಿ ಜಿ ವಕೀಲರಿಂದಃ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**